**ದಿನಾಂಕಃ 07.08.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.**

## ಮುಂದುವರೆದ ಪಾಟೀಸವಾಲುಃ ಪ್ರತಿವಾದಿಗಳ ಪರ ವಕೀಲರಾದ ಶ್ರೀ ಸಿ ಎಸ್ ಅವರಿಂದ

1. ನಾನು ವ್ಯವಸಾಯ ಮಾಡುತ್ತೇನೆ. ಒಡೆಯರಹೊಸಳ್ಳಿಯಲ್ಲಿ ವ್ಯವಸಾಯ ಮಾಡುತ್ತೇನೆ. ನಾನು ವ್ಯವಸಾಯ ಮಾಡುತ್ತಿರುವ ಜಮೀನಿನ ಸರ್ವೆ ನಂಬರ್ ನನಗೆ ಗೊತ್ತಿಲ್ಲ. ನಾನು ಯಾವುದೇ ವ್ಯವಸಾಯ ಮಾಡುತ್ತಿಲ್ಲ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ದಾವಾದ ಜಮೀನುಗಳ ಸರ್ವೆ ನಂಬರ್ ಗಳನ್ನು ಕೂಡ ನನಗೆ ಹೇಳಲು ಬರುವುದಿಲ್ಲ. ದಾವಾ ಜಮೀನುಗಳ ಆರ್ ಟ್ ಸಿ ಗಳು ಪ್ರತಿವಾದಿ 1 ಮತ್ತು 2 ರವರಿನ ಹೆಸರಿನಲ್ಲಿ ಇವೆ. ಎಷ್ಟು ವರ್ಷಗಳಿಂದ ಅವರ ಹೆಸರಿನಲ್ಲಿ ಆರ್ ಟಿ ಸಿ ಗಳು ಬರುತ್ತಿವೆ ಎಂದರೆ ನನಗೆ ಹೇಳಲು ಬರುತ್ತಿಲ್ಲ. ಅವರಿಗೂ ಮೊದಲು ದಾವಾ ಜಮೀನುಗಳು ನನ್ನ ತಾತನ ಹೆಸರಿನಲ್ಲಿದ್ದವು. ಈ ಜಮೀನುಗಳು ನನ್ನ ತಾತನ ಹೆಸರಿನಲ್ಲಿದ್ದವು ಎಂಬುದಕ್ಕೆ ದಾಖಲೆಗಳನ್ನು ಹಾಜರುಪಡಿಸಿದ್ದೇನೆ.

2. ನಮ್ಮ ತಂದೆ ಬದುಕಿದ್ದಾಗಲೆ ದಾವಾ ಜಮೀನುಗಳು ಪ್ರತಿವಾದಿಗಳ ತಂದೆಯ ಹೆಸರಿಗೆ ಮಂಜೂರಾಗಿದ್ದವು ಎಂದರೆ ಹಾಗೆ ಹೇಳುತ್ತಾರೆ ನನಗೆ ಗೊತ್ತಿಲ್ಲ. ಬೆಟ್ಟಾಚಾರಿರವರ ಹೆಸರಿಗೆ ದಾವಾ ಜಮೀನುಗಳು ಸರ್ಕಾರದಿಂದ ನೇರವಾಗಿ ಮಂಜೂರಾಗಿದ್ದವು ಎಂದರೆ ಅವೆಲ್ಲಾ ನನಗೆ ಗೊತ್ತಿಲ್ಲ ಆದರೆ ಜಮೀನುಗಳು ನನ್ನ ತಾತನಿಗೆ ಮಾತ್ರ ಸೇರಿದ್ದು. ದಾವಾ ಜಮೀನುಗಳು ಪ್ರತಿವಾದಿಗಳ ತಂದೆಗೆ ಸರ್ಕಾರದಿಂದ ನೇರವಾಗಿ ಮಂಜೂರಾಗಿರುವುದರಿಂದ ಅವುಗಳಲ್ಲಿ ಭಾಗ ಕೇಳಲು ಯಾವುದೇ ಹಕ್ಕಿಲ್ಲ ಎಂದರೆ ಸರಿಯಲ್ಲ. ದಾವಾ ಜಮೀನುಗಳ ಪೈಕಿ 3 ½ ಎಕರೆ ಹಳ್ಳಿಕೆರೆಯಲ್ಲಿವೆ, 1 ½ ಎಕರೆ ಒಡೆಯರಹೊಸಳ್ಳಿಯಲ್ಲಿವೆ. ಹಳ್ಳಿಕೆರೆಯಲ್ಲಿ ಇದೆ ಎನ್ನಲಾದ ಜಮೀನಿನ ಉತ್ತರಕ್ಕೆ ನನಗೆ ಹೇಳಲು ಬರುತ್ತಿಲ್ಲ ಮತ್ತು ದಕ್ಷಿಣಕ್ಕೆ ಕುಂಟೆ ನರಸಿಂಹಚಾರ್ಯರವರ ಜಮೀನು ಇದೆ. ದಾವಾ 2 ನೇ ಐಟಂ ಸ್ವತ್ತಿನ ಚೆಕ್ಕುಬಂದಿ ನನಗೆ ಹೇಳಲು ಬರುತ್ತಿಲ್ಲ ಅವಕಾಶ ಕೊಟ್ಟರೆ ನನ್ನ ಮಗ ಹೇಳುತ್ತಾನೆ ಎನ್ನುತ್ತಾರೆ. ನಾನು ಹೇಳುತ್ತಿರುವುದು ಸುಳ್ಳು ನನಗೆ ಜಮೀನು ಎಲ್ಲಿದೆ ಎಂಬುದೇ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ.

3. ಈಗಲು ಕೂಡ ದಾವಾ ಜಮೀನಿನಲ್ಲಿ ಪ್ರತಿವಾದಿಗಳೇ ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ಸರಿ ನಾವು ಕೂಡ ಮಾಡುತ್ತಿದ್ದೇವೆ. ನೀವು ಯಾವಾಗಿನಿಂದ ವ್ಯವಸಾಯ ಮಾಡುತ್ತಿದ್ದೆವು ಎಂದರೆ ನಾವು ಮಾಡುತ್ತಿಲ್ಲ ನಮ್ಮ ತಂದೆ ವ್ಯವಸಾಯ ಮಾಡುತ್ತಿದ್ದರು ನಮ್ಮನ್ನು ಬಿಡುತ್ತಿಲ್ಲ. ಪ್ರತಿವಾದಿಗಳ ತಂದೆ ಬೆಟ್ಟಾಚಾರಿರವರು ಕಾಡು ಕಡಿದು ಜಮೀನು ಮಾಡಿ ಸಾಗುವಳಿ ತೆಗೆದುಕೊಂಡಿದ್ದಾರೆ ಎಂದರೆ ಸರಿಯಲ್ಲ. ನಮ್ಮ ತಂದೆ ತೀರಿಹೋಗಿ 17 ವರ್ಷಗಳಾಯಿತು. ದಾವಾ ಜಮೀನು ನಮ್ಮ ತಂದೆ ಬದುಕಿದ್ದಾಗಲೇ ಪ್ರತಿವಾದಿಗಳ ತಂದೆಗೆ ಮಂಜೂರಾಗಿತ್ತು ಎಂದರೆ ಹಾಗೇನಾದರೂ ನಮ್ಮ ತಂದೆಗೆ ಹಕ್ಕು ಇತ್ತು ಎಂದರೆ ಆ ಸಂದರ್ಭದಲ್ಲೆ ತಕರಾರು ಮಾಡುತ್ತಿದ್ದರು ಎಂದರೆ ಸರಿಯಲ್ಲ. ನಮ್ಮ ತಂದೆಗೆ ದಾವಾ ಜಮೀನುಗಳಲ್ಲಿ ಹಕ್ಕಿದ್ದರೆ ಆ ಸಮಯದಲ್ಲೇ ತಕರಾರು ಮಾಡುತ್ತಿದ್ದರು ಎಂದರೆ ಸರಿಯಲ್ಲ. ನನ್ನ ಮದುವೆಯಾಗಿ 31 ವರ್ಷಗಳಾಗಿವೆ. ನನ್ನ ಮದುವೆಯಾದ ನಂತರ ಪ್ರತಿವಾದಿಗಳಿಗೆ ಜಮೀನುಗಳು ಮಂಜೂರಾಗಿವೆ ಎಂದರೆ ನನಗೆ ಅದನ್ನು ಹೇಳುವಷ್ಟು ಅನುಭವ ಇಲ್ಲ. ನಾನು ಈಗ ಹಾಜರುಪಡಿಸಿರುವುದನ್ನು ಹೊರತುಪಡಿಸಿ ನನ್ನ ಬಳಿ ಬೇರೆ ದಾಖಲೆಗಳು ಇಲ್ಲ.

ಮುಂದುವರೆದ ಪಾಟೀಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಜೈಬುನ್ನಿಸಾ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.